ಅಧ್ಯಕ್ಷರು : ಆಯಿತು. ಸಂಜೆ ಒಳಗೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಹೆಚ್.ಡಿ. ರೇವಣ್ಣ : ಒಂದು ನಿಮಿಷ ತಡಿಯಿರಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಸಂಜೆಯೊಳಗೆ ನಾವು ನಿಮಗೆ ತಿಳಿಸುತ್ತೇವೆ.

ಅಧ್ಯಕ್ಷರು : ಇವತ್ತು ಸಂಜೆ ಒಳಗೆ ತಿಳಿಸುತ್ತಾರೆ.

6) ವಿಷಯ : ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಿವೇಶನಗಳ ಅಕ್ರಮ ಸಕ್ರಮದ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಿವೇಶನಗಳ ಅಕ್ರಮ ಸಕ್ರಮದ ಬಗ್ಗೆ ಮಾನ್ಯ ಸಚಿವರಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಸಚಿವರು) : ಈ ವಿಚಾರದ ಬಗ್ಗೆ ಈ ಹಿಂದೆ ಕೂಡ ಜಯಚಂದ್ರರವರು ಪ್ರಸ್ತಾಪ ಮಾಡಿದ್ದರು. ಏನೇನು ಅಕ್ರಮ ನಿವೇಶನಗಳನ್ನು ಹಂಚಿಕೆ ಮಾಡಿದ್ದರು ಆ ಹಂಚಿಕೆಯ ಪ್ರಕ್ರಿಯೆಯನ್ನು ನಾವು ರದ್ದು ಮಾಡಿದ್ದೇವೆ. ರದ್ದು ಮಾಡಿದ ನಂತರ ಅವರು ಕೋರ್ಟಿಗೆ ಹೋಗಿದ್ದಾರೆ. ಆ ತಡೆಯಾಜ್ಞೆಯನ್ನು ತೆಗೆಸುವುದಕ್ಕೆ ನಾವು ಸರ್ಕಾರದ ಕಡೆಯಿಂದ ಕೂಡಲೇ ಕ್ರಮವನ್ನು ತೆಗೆದುಕೊಂಡು ಯಾರ್ಯಾರು ಇದಕ್ಕೆ ಕಾರಣಕರ್ತರು ಇದ್ದಾರೆ ಅವರ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ.

7) ವಿಷಯ : ಗಿರಿನಗರ ಪೊಲೀಸ್ ಠಾಣೆಯಲ್ಲಿ ಅಮಾಯಕರ ಮೇಲೆ ನಡೆದ ಘಟನೆಯ ಬಗ್ಗೆ

ಶ್ರೀ ಗೂಳಿಹಟ್ಟಿ ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಸಚಿವರಲ್ಲಿ ನನ್ನ ಮನವಿ. ನಿನ್ನೆ ನನ್ನ ಮತಕ್ಷೇತ್ರದವರು ಬೆಂಗಳೂರಿಗೆ ಉದ್ಯೋಗ ಅರಸಿಕೊಂಡು ಕೂಲಿ ಮಾಡಲಿಕ್ಕೆ ಬಂದಿದ್ದರು. ಅವರು paint ಮಾಡಲಿಕ್ಕೆ ಒಂದು ಮನೆಗೆ ಹೋದರೆ ಅವರ ಮೇಲೆ ಕಳ್ಳತನ ಆರೋಪ ಹೊರಿಸಿ ಅವರನ್ನು ಗಿರಿನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮನಸ್ಸೋ ಇಚ್ಛೆ ಥಳಿಸಿ, ನೇತಾಕಿ ಅವರ ಮೇಲೆ ಮಾರಣಾಂತಿಕ ಹಲ್ಲೆ

ಮಾಡಿದ್ದಾರೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಕೂಡ ಒಂದು episode type ವರದಿಯಾಗಿದೆ. ದಯಮಾಡಿ ಗಿರಿನಗರ ಪೊಲೀಸ್ ಠಾಣೆಯವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ರಾಜ್ಯದ ಮೂಲೆ ಮೂಲೆಯಿಂದ ಅಮಾಯಕರು ಬೆಂಗಳೂರಿಗೆ ಕೂಲಿಗಾಗಿ ಬರುತ್ತಾರೆ. ಅವರಿಗೆ ತೊಂದರೆಯನ್ನು ಕೊಡತಕ್ಕಂಥ ಕೆಲಸ ಈ ಬೆಂಗಳೂರು ನಗರದ ಪೊಲೀಸ್ ಠಾಣೆಯಲ್ಲಿ ನಡೆಯುತ್ತಿದೆ. ದಯಮಾಡಿ ಅಂಥವರಿಗೆ ರಕ್ಷಣೆ ಕೊಡಬೇಕೆಂದು ನಿಮ್ಮ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೂಳಿಹಟ್ಟಿ ಶೇಖರ್‌ರವರು ಈ ವಿಚಾರದ ಬಗ್ಗೆ ನನ್ನೊಂದಿಗೆ personal ಆಗಿ ಮಾತನಾಡಿದ್ದಾರೆ. ಇವತ್ತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರ ಕ್ಷೇತ್ರದಿಂದ ಬಂದ ಜನ ಕೆಲಸ ಮಾಡುವಂಥ ಸಂದರ್ಭದಲ್ಲಿ ಅವರ ಮೇಲೆ ಕಳ್ಳತನದ ಆರೋಪ ಹೊರಿಸಿದ್ದಾರೆಂದು ಹೇಳಿದ್ದಾರೆ. ಪೊಲೀಸ್ ಠಾಣೆಯಲ್ಲಿ ಅವರೊಂದಿಗೆ ಬಹಳ ಅಮಾನುಷವಾಗಿ ನಡೆದುಕೊಂಡಿದ್ದಾರೆಂದು ಹೇಳಿದ್ದಾರೆ. ಇದುವರೆಗೆ ಪೊಲೀಸ್ ಠಾಣೆಯ ರಂಗಸ್ವಾಮಿ ಮತ್ತು ಮಾಲತೇಶ್‌ರವರ ಮೇಲೆ ಅವರು ಆ ರೀತಿ ಮಾಡಿದ್ದಾರೆಂದು ಯಾವುದೇ ರೀತಿಯ complaints ಬಂದಿಲ್ಲ. ಆದರೂ ಸಹ ಅಲ್ಲಿನ ಡಿಸಿಪಿ ಯವರಿಗೆ ಹೇಳಿ ಇದರ ಬಗ್ಗೆ ತನಿಖೆ ಮಾಡಲಿಕ್ಕೆ ತಿಳಿಸುತ್ತೇನೆ ಹಾಗೂ ವಿಚಾರಣೆಯ ಸಂದರ್ಭದಲ್ಲಿ ಅವರ ಮೇಲೆ ಅಮಾನುಷವಾಗಿ ವರ್ತಿಸಿದ್ದಾರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಡಿಸಿಪಿ ಯವರಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಗೂಳಿಹಟ್ಟಿ ಶೇಖರ್ : ಅವರನ್ನು ಹೆದರಿಸಲಿಕ್ಕೆ ಖಾಲಿ ಪತ್ರದ ಮೇಲೆ ಸಹಿ ಹಾಕಿಸಿಕೊಂಡು ಹೋಗಿದ್ದಾರೆ.

ಅಧ್ಯಕ್ಷರು : ಆಯಿತು. ಕ್ರಮ ತೆಗೆದುಕೊಳ್ಳುತ್ತಾರೆ. ಖಾದರ್ ಮಾತನಾಡಿ.

8) ವಿಷಯ: ನವ ಮಂಗಳೂರು ಬಂದರಿನ ಸುತ್ತ ಮುತ್ತ ಪರಿಸರದ ಬಗ್ಗೆ ಕಾಳಜಿ ಮಹಿಸುವ ಕುರಿತು.

ಶ್ರೀ ಯು.ಟಿ. ಖಾದರ್ (ಮಂಗಳೂರು) : ನವ ಮಂಗಳೂರು ಬಂದರಿನಲ್ಲಿ ವಿದೇಶಗಳಿಂದ ಇವತ್ತು ಕಲ್ಲಿದ್ದಲ್ಲನ್ನು ಆಮದು ಮಾಡಿ ಅಲ್ಲಿಂದ ಜಿಂದಾಲ್‌ಗೆ, ಬೇರೆ ಕಡೆಗೆ ಸಾಗಾಣಿಕೆ ಮಾಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ